Appointment of Retired Persons

115. SRI P. N. REDDY (Malur).—Will the Chief Minister be pleased to state:—

(a) whether there is any decision by the Government not to appoint any retired persons as officials in any department both in the Government and in Co-operative Bodies;

(b) if so, whether any move, to appoint a retired person as Deputy Secretary in the Karnataka Legal Aid Board and Advice Board?

SRI R. GUNDU RAO (Chief Minister).—

(a) Government have decided not to re-employ retired Government servants in Government Departments as well as statutory/non-statutory bodies, Corporations and Government Companies owned or controlled by Government or where Government have a major financial interest.

(b) No.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ (ಅ) ಉತ್ತರ ಕೊಡುತ್ತಾ, ಸರ್ಕಾರಿ ಇಲಾಖೆ, ಶಾಸನಾತ್ಮಕ, ಶಾಸನಾತ್ಮಕವಲ್ಲದ ಮಂಡಳಿಗಳು, ಸರ್ಕಾರದ ಸ್ವಾಮ್ಯಕ್ಕೆ ಅಥವಾ ನಿಯಂತ್ರಣಕ್ಕೆ ಒಳಪಟ್ಟ ಅಥವಾ ಸರ್ಕಾರದವರ ಬಹುಪಾಲು ಬಂಡವಾಳವಿರುವ ಸಂಸ್ಥೆ ಹಾಗೂ ಕಂಪನಿಗಳಲ್ಲಿ ನಿವೃತ್ತಿ ಹೊಂದಿದ ಸರ್ಕಾರಿ ನೌಕರರನ್ನು ಪುನರ್ ನೇಮಕ ಮಾಡಿಕೊಳ್ಳ ಕೂಡದೆಂದು ಸರ್ಕಾರದವರು ನಿರ್ಧರಿಸಿದ್ದಾರೆಂದು ಹೇಳಿದ್ದಾರೆ. ನಿಜವಾಗಿಯೂ ಈ ವಿಚಾರದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಆದರೆ, ಕರಾರುರೀತ್ಯ ತೆಗೆದುಕೊಳ್ಳುವುದಕ್ಕೆ ಈ ನಿರ್ಬಂಧ ಅನ್ವಯಿಸುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಎಲ್ಲ ರೀತಿಯ ಪುನರ್ ನೇಮಕಗಳಿಗೂ ಇದೂ ಅನ್ವಯಿಸುತ್ತದೆ. ಯಾವುದೇ ರೀತಿಯ ಪುನರ್ ನೇಮಕವನ್ನು ಸರ್ಕಾರ ಮಾಡುವುದಿಲ್ಲ.

ಪ್ರಶ್ನೆ ೧೪೫ (೫೩೮)

ಶ್ರೀ ಎಸ್.ಎಂ. ಶೀನ್ಯಾಳ ಚಂದ್ರಶೇಖರ್.—ಸ್ವಾಮಿ, ತಾವು ನಿನ್ನೆ ಇರಲಿಲ್ಲ, ಉಪಾಧ್ಯಕ್ಷರು ಇದ್ದರು. ನಾನು ಸರ್ಕಾರವನ್ನು ಪೇಚಿಗೆ ಸಿಕ್ಕಿಸುವುದಕ್ಕೆ ಇಷ್ಟಪಡುವುದಿಲ್ಲ, ಹೋದವರ್ಷ ಬಜೆಟ್ಟಿನಲ್ಲಿ ಕೇಳಿದ ಪ್ರಶ್ನೆಯನ್ನೇ ಪುನಃ ಕೇಳಿದ್ದೇನೆ. ಉತ್ತರ ಮಾತ್ರ ತದ್ವಿರುದ್ಧವಾಗಿ ಕೊಟ್ಟಿದ್ದಾರೆ. ಆ ದಿವಸ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು, ತನಿಖೆ ಸಂಪೂರ್ಣ ಆಗಿದೆ, ಕೇಂದ್ರ ಸರ್ಕಾರಕ್ಕೆ ಹಣಕ್ಕೆ ಬರೆದಿದ್ದೇವೆ, ಹಣ ಮಂಜೂರಾದ ತಕ್ಷಣ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಇವತ್ತಿನ ಉತ್ತರದಲ್ಲಿ ವಿವರವಾದ ತನಿಖೆಯನ್ನು ಪೂರ್ತಿಗೊಳಿಸಿ, ತಾಂತ್ರಿಕ ಸಾಧ್ಯತೆಯನ್ನು ಸ್ಥಿರಪಡಿಸಿದ ನಂತರ ಹಾಗೂ ದೊರಕಲಿರುವ ಹಣವನ್ನು ಅವಲಂಬಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ತನಿಖೆ ಸಂಪೂರ್ಣವಾಗಿದೆ ಎನ್ನುವ ಉತ್ತರ ಹೋದವರ್ಷ ಸಿಕ್ಕಿತ್ತು, ಈ ವರ್ಷ ಸಿಕ್ಕಿಲ್ಲ ಇದಕ್ಕೆ ಕಾರಣವೇನು ?

MR. SPEAKER.—I will held over this question and verify whether you had put the same question.